DEPARTMENT / SUBJECT: Court matter

NAME OF THE NEWS PAPER: ವಿಜಯವಾಣಿ          DATE: 29/11/17

# ಕಡ್ಡಾಯ ನಿರೀಕ್ಷಣಾ ಅವಧಿ ಘೋಷಣೆ ಗೊಂದಲಕ್ಕೆ ತೆರೆ

**ಕರ್ತವ್ಯದ ಅವಧಿ ನಿಗದಿ ಮಾಡುವಂತೆ ಸೂಚನೆ**

ಬೆಂಗಳೂರು: ಮೀಸಲು ಬಡ್ತಿ ವಿಚಾರದಲ್ಲಿ ಸುಪ್ರೀಂಕೋರ್ಟ್ ನೀಡಿದ ತೀರ್ಪಿನ ಬಳಿಕ ತಲೆದೋರಿದ್ದ ಕಡ್ಡಾಯ ನಿರೀಕ್ಷಾ ಅವಧಿ ಘೋಷಣೆ ಗೊಂದಲಕ್ಕೆ ಸರ್ಕಾರ ತೆರೆ ಎಳೆದಿದೆ.

ಬಿ.ಕೆ.ಪವಿತ್ರ ಪ್ರಕರಣದ ತೀರ್ಪಿನ ಹಿನ್ನೆಲೆಯಲ್ಲಿ ಜ್ಯೇಷ್ಠತೆ ಪರಿಷ್ಕರಣ ಪರಿಣಾಮ ಹಿಂಬಡ್ತಿಗೆ ಒಳಗಾಗಿ ಕರ್ತವ್ಯಕ್ಕೆ ವರದಿಮಾಡಿಕೊಳ್ಳದ ಪರಿಶಿಷ್ಟ ಜಾತಿ, ವರ್ಗದ ಅಧಿಕಾರಿ-ನೌಕರರ ನಿರೀಕ್ಷಣಾ ಅವಧಿ ಬಗ್ಗೆ ಸರ್ಕಾರದಲ್ಲೆ ಗೊಂದಲ ಉಂಟಾಗಿತ್ತು. ಹಿಂಬಡ್ತಿಗೊಂಡು ಬಳಿಕ ಹಿಂಬಡ್ತಿ ರದ್ದಾಗಿ ಮರು ಸ್ಥಳ ನಿಯುಕ್ತಿಗೊಂಡ ಅವಧಿಯನ್ನು ಕಡ್ಡಾಯ ನಿರೀಕ್ಷಣಾ ಅವಧಿ ಎಂದು ಪರಿಗಣಿಸಬೇಕೆಂದು ರಾಜ್ಯ ಪರಿಶಿಷ್ಟ ಜಾತಿ, ಪಂಗಡಗಳ ನೌಕರರ ಸಮನ್ವಯ ಸಮಿತಿ ಸರ್ಕಾರವನ್ನು ಒತ್ತಾಯಿಸಿತ್ತು. ಆದರೆ, ಸರ್ಕಾರ ವಿವಿಧ ನ್ಯಾಯಾಲಯಗಳ ಆದೇಶವನ್ನು ಪ್ರಸ್ತಾಪಿಸಿ, ಇದೀಗ ಸುತ್ತೋಲೆ ಹೊರಡಿಸಿ ತನ್ನ ನಿಲುವನ್ನು ಸ್ಪಷ್ಟಪಡಿಸಿದೆ. ನ್ಯಾಯಾಲಯದ ತೀರ್ಪು ಅಥವಾ ನಿರ್ದೇಶನಗಳ ಆಧಾರದಲ್ಲಿ ಸರ್ಕಾರ ಕಾಲಕಾಲಕ್ಕೆ ಹೊರಡಿಸುವ ಸುತ್ತೋಲೆ ಮತ್ತು ಸೂಚನೆಗಳನ್ನು ಗೌರವಿಸುವುದು, ಪಾಲಿಸುವುದು ನೌಕರರ ಆದ್ಯ ಕರ್ತವ್ಯವಾಗಿದೆ ಎಂದು ಖಡಕ್ ಅಭಿಪ್ರಾಯ ನೀಡಿದೆ. ಹಿಂಬಡ್ತಿ ಹೊಂದಿದವರು ಸಕಾಲದಲ್ಲಿ ನಿಯುಕ್ತಿಯಾದ ಕಡೆ ವರದಿ ಮಾಡಿಕೊಂಡಿಲ್ಲವೇ ಎಂಬುದನ್ನು ಪ್ರತ್ಯೇಕವಾಗಿ ಪರಿಶೀಲಿಸಿ, ಕರ್ತವ್ಯದ ಅವಧಿ ಮತ್ತು ನಿರೀಕ್ಷಣಾ ಅವಧಿ ನಿಗದಿ ಮಾಡುವಂತೆ ಇಲಾಖೆಗಳಿಗೆ ಸೂಚನೆ ನೀಡಲಾಗಿದೆ.